ವೇದಾವತಿ ಎಚ್.ಎಸ್.

# ನಿಸ್ವಾರ್ಥದ ಫಲ

ನಾಗಪುರ ಎಂಬ ಊರಿನಲ್ಲಿ ಕ್ಷಾಮದಿಂದಾಗಿ ವಿಪರೀತ ಬಡತನವಿತ್ತು. ಆ ಊರಿನಲ್ಲಿ ತಾಯಿ ಕಮಲ ಮತ್ತು ಮಗಳು ಕಣ್ಣಮ್ಮ ಗುಡಿಸಲಿನಲ್ಲಿ ವಾಸವಿದ್ದರು. ಕ್ಷಾಮದಿಂದಾಗಿ ಅವರು ಊಟಕ್ಕೂ ಗತಿಯಿಲ್ಲದೆ ಪರದಾಡುತ್ತಿದ್ದರು. ಒಂದು ದಿನ ಕಮಲ, 'ಕಣ್ಣಮ್ಮಾ, ನಾನೆಂತಹ ದೌರ್ಭಾಗ್ಯೆ. ನಿನಗೆ ಒಂದು ಹೊತ್ತು ಊಟ ಹಾಕುವ ಸ್ಥಿತಿಯೂ ಇಲ್ಲವಲ್ಲ' ಎಂದು ದುಃಖದಿಂದ ತನ್ನ ಸಂಕಟವನ್ನು ತೋಡಿಕೊಂಡಳು.

ಕಣ್ಣಮ್ಮ, 'ಅಮ್ಮಾ, ನಾನೂ ಅದೇ ಚಿಂತಿಸುತ್ತಿದ್ದೇನೆ. ನೀನು ಊಟ ಮಾಡಿ ಎಷ್ಟೋ ದಿನಗಳಾದವು. ನಿನಗಾಗಿ ನಾನು ಎಲ್ಲಾದರೂ ಹೋಗಿ ಏನಾದರೂ ತಿನ್ನಲು ತರುತ್ತೇನೆ' ಎಂದಳು.

'ಇಡೀ ಹಳ್ಳಿಗೆ ಕ್ಷಾಮ ತಟ್ಟಿರುವಾಗ ನಿನಗೆ ಯಾರು ಅನ್ನ ಹಾಕುತ್ತಾರೆ?' ಎಂದಳು ಕಮಲ.

'ಅಮ್ಮಾ, ಹಸಿವು ನಿನ್ನನ್ನು ಕಿತ್ತು ತಿನ್ನುತ್ತಿರುವಾಗ ಸುಮ್ಮನೆ ನೋಡುತ್ತಾ ಕುಳಿತುಕೊಳ್ಳಲಾಗದು. ಎಲ್ಲಿಯಾದರೂ ಪ್ರಯತ್ನ ಮಾಡುತ್ತೇನೆ' ಎಂದ ಕಣ್ಣಮ್ಮ, ತನ್ನ ಮತ್ತು ತಾಯಿಯ ಹಸಿವನ್ನು

